**ಸಾಕ್ಷಿಯನ್ನು ದಿನಾಂಕಃ23.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎನ್ ಆರ್ ವಕೀಲರಿಂದಃ**

5. ಮರಿಯಕ್ಕ ಕಳ್ಳಿಕೊಪ್ಪಲಿನವರು. ಮರಿಯಕ್ಕನ ಒಡಹುಟ್ಟಿದವರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಸಣ್ಣಮ್ಮನವರನ್ನು ಮರಿಯಕ್ಕನ ತಮ್ಮನಿಗೆ ಕಿರಂಗೂರಿಗೆ ಮದುವೆ ಮಾಡಿಕೊಡಲಾಗಿತ್ತು. ಸಣ್ಣಮ್ಮನ ಕುಟುಂಬದ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಸಣ್ಣಮ್ಮನನ್ನು ಕಿರಂಗೂರಿಗೆ ಮದುವೆ ಮಾಡಿಕೊಟ್ಟ ಮೇಲೆ ಅವರ ಕುಟುಂಬದ ಯಾವುದೇ ವ್ಯವಹಾರಗಳಿಗೆ ನಾನು ಖುದ್ದು ಭಾಗಿಯಾಗಿಲ್ಲ. ಸಣ್ಣಮ್ಮ ಯಾವಾಗ ಎಲ್ಲಿ ಕಾಲವಾದರು ಎಂದು ನನಗೆ ಖುದ್ದು ಮಾಹಿತಿ ಇಲ್ಲ. ಮರಿಯಕ್ಕ ಕಾಲವಾದ ಮೇಲೆ ಅವರ ಕುಟುಂಬದ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ಮರಿಯಕ್ಕನಿಗೆ ಈ ದಾವಾ ಸ್ವತ್ತು ಬಿಟ್ಟು ಬೇರೆ ಯಾವ ಆಸ್ತಿ ಇತ್ತು ಎಂದು ನನಗೆ ಮಾಹಿತಿ ಇಲ್ಲ ಎಂದರೆ, ಅವರಿಗೆ ಕಿರಂಗೂರು ಗ್ರಾಮದಲ್ಲಿ ಬೇಕಾದಷ್ಟು ಆಸ್ತಿ ಇತ್ತು, ಅದರ ವಿವರ ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ದಾಖಲಾತಿ ನೋಡಿಲ್ಲ. ಈ ಕೇಸ್ ಹಾಕಿದ ನಂತರ ಆ ಬಗ್ಗೆ ದಾಖಲಾತಿ ನೋಡಲು ನನಗೆ ತೊಂದರೆ ಇರಲಿಲ್ಲ. ಮರಿಯಕ್ಕನಿಗೆ ಗಂಡು ಮಕ್ಕಳು ಇರಲಿಲ್ಲ, ಸಣ್ಣಮ್ಮನನ್ನು ತನ್ನ ತಮ್ಮನಿಗೆ ಮದುವೆ ಮಾಡಿಕೊಟ್ಟು ಮನೆಯಲ್ಲಿಯೇ ಇಟ್ಟುಕೊಂಡಿದ್ದಳು ಎಂಬ ಬಗ್ಗೆ ನಾನು ಯಾವುದೇ ದಾಖಲಾತಿ ನೋಡಿಲ್ಲ. ಸಣ್ಣಮ್ಮ ಮತ್ತು ಮರಿಗೌಡ ರವರು ಮರಿಯಕ್ಕನಿಗೆ ಸೇರಿದ ಆಸ್ತಿಗಳ ಬಗ್ಗೆ ವ್ಯವಹಾರ ಮಾಡಿದ ಬಗ್ಗೆ ನಾನು

ದಾಖಲೆಗಳನ್ನು ನೋಡಿಲ್ಲ. ಸಣ್ಣಮ್ಮ ಮದುವೆಯಾದ ಮೇಲೆ ಅವಳ ಗಂಡನ ಮನೆಯಲ್ಲಿ ವಾಸ ಇದ್ದಳು, ಅವಳು ಯಾವತ್ತೂ ಮರಿಯಕ್ಕನ ಜೊತೆ ವಾಸ ಇರಲಿಲ್ಲ ಎಂದರೆ ಸರಿಯಲ್ಲ.

6. ನನ್ನ ತಂದೆ ದಾವಾ ಸ್ವತ್ತಿನಲ್ಲಿ 2 ಎಕರೆ 7 ಗುಂಟೆ ಜಮೀನನ್ನು 1967 ರಲ್ಲಿ ಖರೀದಿ ಮಾಡಿದ್ದು, ಆಗ ನಾನು ಇನ್ನೂ ಜನಿಸಿರಲಿಲ್ಲ. ನನ್ನ ತಂದೆ ಮೃತ ಪಟ್ಟು ಸುಮಾರು 20 ವರ್ಷಗಳಾಗಿವೆ. ಈ ದಾವೆಯನ್ನು ಸಲ್ಲಿಸಿದ ನಂತರ ನಾನು ಪ್ರತಿವಾದ ಪತ್ರ ಸಲ್ಲಿಸುವ ತನಕ ನಮ್ಮ ತಂದೆ ಖರೀದಿ ಮಾಡಿದ ಆಸ್ತಿ ಖರೀದಿ ಮಾಡಿದ ಕಾಲಕ್ಕೆ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ಪರಿಶೀಲನೆ ಮಾಡಿದ್ದೇನೆ. ಆ ಆಸ್ತಿ ಬೋರಯ್ಯನ ಹೆಸರಿನಲ್ಲಿ ಖಾತೆ ಇತ್ತು, ಅವರಿಂದ ಖರೀದಿ ಆಗಿದೆ. ಬೋರಯ್ಯನವರ ಹೆಸರಿಗೆ ಯಾವ ದಾಖಲೆಗಳ ಆಧಾರದ ಮೇಲೆ ಖಾತೆ ಆಗಿತ್ತು ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ಯಾವ ಸಾಲಿನಲ್ಲಿ ಬೋರಯ್ಯನ ಹೆಸರಿಗೆ ಖಾತೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಎಷ್ಟು ಎಕರೆ ಬೋರಯ್ಯನ ಹೆಸರಿಗೆ ಖಾತೆ ಇತ್ತು ಎಂದು ನನಗೆ ಗೊತ್ತಿಲ್ಲ. ಬೋರಯ್ಯನ ಹೆಸರಿಗೆ ಖಾತೆ ಇದ್ದ ಬಗ್ಗೆ ದಾಖಲೆಯನ್ನು ನೋಡಿದ್ದೇನೆ. ಎಷ್ಟು ಎಕರೆ ಅವರ ಹೆಸರಿಗೆ ಖಾತೆ ಆಗಿತ್ತು ಎಂದು ನಾನು ನೋಡಿಲ್ಲ. ಬೋರಯ್ಯನಿಗೆ ನಮ್ಮ ತಂದೆಗೆ 2 ಎಕರೆ 7 ಗುಂಟೆ ಜಮೀನು ಮಾರಾಟ ಮಾಡುವ ಹಕ್ಕು ಇರಲಿಲ್ಲ, ಮರಿಯಕ್ಕನ ಎಲ್ಲಾ ವಾರಸುದಾರರಿಗೆ ಅದರ ಮೇಲೆ ಹಕ್ಕು ಇತ್ತು ಎಂದರೆ ಸರಿಯಲ್ಲ. ಆ ಆಸ್ತಿಯ ಮೇಲೆ ನಂಜಮ್ಮನ ಮಕ್ಕಳಿಗೆ

ಹಕ್ಕು ಇದ್ದು,ಅವರಿಗೆ ಮೋಸ ಮಾಡಬೇಕೆಂದು ನನ್ನ ತಂದೆ ಸುಳ್ಳು ಕ್ರಯ ಪತ್ರ ಬರೆಸಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಂಜಮ್ಮ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದರಿಂದ ಅವರ ಮಕ್ಕಳಿಗೆ ಹಕ್ಕು ಬರುವುದಿಲ್ಲ ಎಂದು ನುಡಿದಿರುತ್ತಾರೆ.ನಂಜಮ್ಮನು ಸಣ್ಣಮ್ಮನಿಗೆ ಯಾವ ದಿನಾಂಕದಂದು ಯಾವ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದಾರೆ ಎಂದು ನಾನು ಪರಿಶೀಲನೆ ಮಾಡಿಲ್ಲ. ಆ ಬಗ್ಗೆ ನಾನು ಪ್ರತಿವಾದ ಪತ್ರ ಸಲ್ಲಿಸಿದಾಗ ಅಥವಾ ಹಿಂದಿನ ದಿನಾಂಕ ಪಾಟೀ ಸವಾಲಿಗೆ ಒಳಪಟ್ಟ ನಂತರ ವಿಚಾರಿಸಲು ಪ್ರಯತ್ನ ಪಟ್ಟಿಲ್ಲ. ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದಾರೆ ಎಂದು ನಾನು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದರೆ, ಮರಿಯಕ್ಕನ ಎಲ್ಲಾ ಆಸ್ತಿಗಳನ್ನು ಬೋರಯ್ಯ ಮಾರಾಟಮಾಡಿರುವುದರಿಂದ ಮತ್ತು ಅವರ ಮಕ್ಕಳು ಇದುವರೆಗೂ ಅದನ್ನು ಪ್ರಶ್ನೆ ಮಾಡದೇ ಇರುವುದರಿಂದ ನಾನು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ.ನಂಜಮ್ಮನು ಸಣ್ಣಮ್ಮನಿಗೆ ಯಾವುದೇ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರಲಿಲ್ಲ,ನಾನು ಆ ಬಗ್ಗೆ ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಕ್ಕು ನಿವೃತ್ತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ, ಅವಶ್ಯಕತೆ ಇದ್ದರೆ ಅರ್ಜಿ ಹಾಕಿ ತಂದು ಹಾಜರು ಪಡಿಸುತ್ತೇನೆ. ನನ್ನ ಪ್ರತಿವಾದ ಪತ್ರ ಸಲ್ಲಿಸುವಾಗ ನಮ್ಮ ವಕೀಲರಿಗೆ ಹಕ್ಕು ನಿವೃತ್ತಿ ಪತ್ರದ ಬಗ್ಗೆ ಹೇಳಿದ್ದೆ.ನಮ್ಮ ವಕೀಲರು ಹಕ್ಕು ನಿವೃತ್ತಿ ಪತ್ರದ ಪ್ರತಿಯನ್ನು ಅವಶ್ಯಕತೆ ಇದ್ದರೆ ತಂದು ಕೊಡಿ,ಇಲ್ಲದಿದ್ದರೆ ಬೇಡ ಎಂದು ಹೇಳಿದ್ದರು.

7. ದಿಃ 05.09.2014 ರಂದು ಪ್ರತಿವಾದಿಗೆ ಆಗಿರುವ ಕ್ರಯ ಪತ್ರವನ್ನು ನಾನು ನೋಡಿಲ್ಲ. ಸಾಕ್ಷಿಯು ಮುಂದುವರಿದು ಆ ಬಗ್ಗೆ ಆರ್ ಟಿ ಸಿ ನೋಡಿದ್ದೇನೆ ಎಂದು ನುಡಿದಿರುತ್ತಾರೆ. ನಾನು ಆ ಕ್ರಯದ ವ್ಯವಹಾರಕ್ಕೆ ಸೇರಿಲ್ಲ. ಕೆಂಪೇಗೌಡನಿಗೆ 2 ವರೆ ಎಕರೆ ಮಾರಾಟ ಮಾಡಲಾಗಿದೆ. ಚಿಕ್ಕ ಮರಿಗೆ ಯಾವುದೇ ಜಮೀನು ಮಾರಾಟ ಮಾಡಿಲ್ಲ. ಆ ರೀತಿ ನನ್ನ ಪ್ರಮಾಣ ಪತ್ರದಲ್ಲಿ ಪ್ರಿಂಟ್ ತಪ್ಪಾಗಿ ಬಂದಿರಬಹುದು. ಕೆಂಪೇಗೌಡನಿಗೆ 1966 ನೇ ಇಸವಿಯಲ್ಲಿ ನಂಜ ಯಾನೆ ಸುಬ್ಬಣ್ಣ ಜಮೀನನ್ನು ಮಾರಾಟ ಮಾಡಿದ್ದಾರೆ. ನಾನು ಆ ಕ್ರಯ ಪತ್ರವನ್ನು ನೋಡಿದ್ದೇನೆ. ನಂಜ ಯಾನೆ ಸುಬ್ಬಣ್ಣ ರವರಿಗೆ ಜಮೀನು ಖಾತೆ ಇದ್ದ ಬಗ್ಗೆ ನಾನು ದಾಖಲೆ ನೋಡಿದ್ದೇನೆ. ಅವನ ಹೆಸರಿನಲ್ಲಿ 26 ಎಕರೆ ಜಮೀನಿಗೆ ಸಂಬಂಧಿಸಿದಂತೆ ದಾಖಲೆ ಇತ್ತು. ನಂಜ ಯಾನೆ ಸುಬ್ಬಣ್ಣನ ಹೆಸರಿಗೆ ಯಾವ ದಾಖಲಾತಿ ಆಧಾರದ ಮೇಲೆ ಜಮೀನು ಖಾತೆ ಆಗಿತ್ತು ಎಂದು ನಾನು ದಾಖಲೆಗಳನ್ನು ಪರಿಶೀಲಿಸಿಲ್ಲ. ಅವನ ಹೆಸರಿನಲ್ಲಿ ಯಾವ ವರ್ಷದಿಂದ ಯಾವ ವರ್ಷದ ವರೆಗೆ ಪ್ರತ್ಯೇಕ ಆರ್ ಟಿ ಸಿ ಇತ್ತು ಎಂದು ನಾನು ದಾಖಲೆ ನೋಡಿಲ್ಲ. ಸಾಕ್ಷಿ ಮುಂದುವರಿದು ಅವನ ಹೆಸರಿನಲ್ಲಿ ಪ್ರತ್ಯೇಕವಾಗಿ ದಾಖಲೆ ಇರಲಿಲ್ಲ, ಜಂಟಿಯಾಗಿ ಇತ್ತು ಎಂದು ನುಡಿದಿರುತ್ತಾರೆ. ಆ ರೀತಿ ಅವರ ಹೆಸರು ಮರಿಯಕ್ಕ ಮತ್ತು ಚಿಕ್ಕ ನಂಜುಂಡನ ಹೆಸರಿನಲ್ಲಿ ಜಂಟಿಯಾಗಿ ಇತ್ತು. ಚಿಕ್ಕ ನಂಜುಂಡ ಮರಿಯಕ್ಕನ ಮೈದುನ ಮತ್ತು ನಂಜ ಯಾನೆ ಸುಬ್ಬಣ್ಣನ ತಂದೆ. ಪ್ರಾರಂಭದಿಂದಲೂ ದಾವಾ ಜಮೀನಿನ ಕಂದಾಯ ದಾಖಲೆಗಳು ಮರಿಯಕ್ಕ ಮತ್ತು ಚಿಕ್ಕ ನಂಜುಂಡನ

ಹೆಸರಿನಲ್ಲಿ ಜಂಟಿಯಾಗಿ ಬರುತ್ತಿದ್ದವು ಎಂದರೆ ಸರಿ. ಮರಿಯಕ್ಕ ಮತ್ತು ಚಿಕ್ಕನಂಜುಂಡ ರವರು ಕಾಲವಾದ ಮೇಲೆ ಅವರಿಬ್ಬರ ವಾರಸುದಾರರ ಹೆಸರಿನಲ್ಲಿ ಕಂದಾಯ ದಾಖಲೆಗಳು ಜಂಟಿಯಾಗಿ ಬರುತ್ತಿದ್ದವು ಎಂದರೆ ಸರಿ. ಯಾವತ್ತೂ ಸಹ ಸಣ್ಣಮ್ಮ ಮತ್ತು ನಂಜ ಯಾನೆ ಸುಬ್ಬಣ್ಣ ರವರ ಹೆಸರಿನಲ್ಲಿ ವೈಯಕ್ತಿಕವಾಗಿ ಆರ್ ಟಿ ಸಿ ಬಂದಿಲ್ಲ ಎಂದರೆ ಸರಿಯಲ್ಲ. ಯಾವ ಸಾಲಿನಿಂದ ಯಾವ ಸಾಲಿನ ವರೆಗೆ ಎಷ್ಟು ಗುಂಟೆ ಜಮೀನು ವೈಯಕ್ತಿಕವಾಗಿ ಆರ್ ಟಿ ಸಿ ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಮರಿಯಕ್ಕ ಮತ್ತು ಚಿಕ್ಕನಂಜುಂಡನ ವಾರಸುದಾರರು ಅನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸಣ್ಣಮ್ಮನ ಮಗ ಬೋರಯ್ಯ ಮತ್ತು ಚಿಕ್ಕನಂಜುಂಡನ ಮಗ ಸುಬ್ಬಣ್ಣ ರವರು ಮಾತ್ರ ಅನುಭವದಲ್ಲಿ ಇದ್ದರು ಎಂದು ನುಡಿದಿರುತ್ತಾರೆ. ಆ ಬಗ್ಗೆ ನಾನು ದಾಖಲಾತಿಯನ್ನು ನೋಡಿದ್ದೇನಾ ಎಂದರೆ, ನಾನೇ ಅನುಭವದಲ್ಲಿ ಇದ್ದಿದ್ದನ್ನು ಮತ್ತು ಬೆಳೆ ಮಾಡುತ್ತಿದ್ದುದನ್ನು ಖುದ್ದಾಗಿ ನೋಡಿದ್ದೇನೆ. ಅವರಿಬ್ಬರು ವೈಯಕ್ತಿಕವಾಗಿ ದಾವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಿದ್ದರ ಬಗ್ಗೆ ದಾಖಲಾತಿ ನೋಡಿದ್ದೇನಾ ಎಂದರೆ ಅವರು ಬ್ಯಾಂಕ್ ನಲ್ಲಿ ಸಾಲ ತೆಗೆದುಕೊಂಡಿದ್ದರು. ನಂಜಮ್ಮನ ಮಗ ಬೋರಯ್ಯನಿಗೆ ಮತ್ತು ಚಿಕ್ಕ ನಂಜುಂಡನ ಮಗ ನಂಜ ಯಾನೆ ಸುಬ್ಬಣ್ಣನಿಗೆ ಯಾವುದೇ ವೈಯಕ್ತಿಕವಾದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂದು ಎಲ್ಲಾ ಕ್ರಯ ಪತ್ರಗಳನ್ನು ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಅವರಿಬ್ಬರಿಗೆ ನನ್ನ ತಂದೆಗೆ ಮತ್ತು ಕೆಂಪೇಗೌಡನಿಗೆ ಜಮೀನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಆ ಜಮೀನಿನಲ್ಲಿ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ನನಗೆ ಈ ಕೇಸ್ ನಲ್ಲಿ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ನಂಜ ಯಾನೆ ಸುಬ್ಬಣ್ಣರವರೊಂದಿಗೆ ಷರೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪುಟ್ಟಸ್ವಾಮಿಗೆ ಕ್ರಯ ಆಗಿದೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಅವರು ಯಾವತ್ತೂ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.